

ವೆಂಕಟರಮಣ ಶರ್ಮ

# ಹಲಸೊಂದು; ತಳಿ ನೂರಾರು!

**ತಮ್ಮ ಪಾಲಿನ ಹತ್ತು ಎಕರೆ ಜಮೀನಿನಲ್ಲಿ ಅಡಿಕೆ, ತೆಂಗು, ಬಾಳೆ, ಕಾಳುಮೆಣಸು ಮುಂತಾದವುಗಳನ್ನು ಬೆಳೆಯುತ್ತಾ, ಹಲಸಿನಲ್ಲಿಯೇ ನೂರಕ್ಕೂ ಹೆಚ್ಚಿನ ತಳಿ ವೈವಿಧ್ಯವನ್ನು ಬೆಳೆಸಿ 'ಮಾದರಿ ಕೃಷಿಕ' ಎನಿಸಿಕೊಂಡವರು ಬಂಟ್ವಾಳ ತಾಲ್ಲೂಕು ಮುಳಿಯದ ವೆಂಕಟರಮಣ ಶರ್ಮ. ಸೀಸನ್ ಇಲ್ಲದಿರುವ ಕಾಲದಲ್ಲೂ ಇವರ ತೋಟದಲ್ಲಿ ಹಲಸು ಸದಾ ಲಭ್ಯ.**

**■ ಸುಮನಾ ಜಿ. ಪ್ರಸಾದ್**

ಕೆಲಸದ ನಿಮಿತ್ತ ಪುತ್ತೂರು ಪೇಟೆಗೆ ಹೋಗಿದ್ದಾಗ ಪರಿಚಯವಿದ್ದ ಬೇಕರಿಯವ ಕರೆದ. 'ಮೇಡಂ, ಹಲಸಿನ ಹಲ್ವ ಹೊಸದಾಗಿ ಬಂದಿದೆ; ರುಚಿ ನೋಡಿ' ಎಂದು ಒಂದು ತುಂಡು ಹಲ್ವ ಕೈಗೆ ನೀಡಿದ. ಸಿಹಿತಿಂಡಿಗಳ ಬಗ್ಗೆ ಅಷ್ಟೊಂದು ಒಲವು ಇರದಿದ್ದರೂ ಹೊಸರುಚಿ ನೋಡಿದಾಗ ಕಣ್ಣರಳಿತು. ಹಲಸಿನ ಹಲ್ವದ ಘಮಲು ಮೂಗಿಗೆ ಅಡರಿ ಒಂದು ತುಂಡು ಮುರಿದು ಬಾಯಿಗೆ ಹಾಕಿದರೆ ವಾಹ್! ಅದೆಂಥ ರುಚಿ, ಅದ್ಭುತ ಸ್ವಾದ! ಒಂದು ತುಂಡು ಸಾಕು ಅಂದುಕೊಂಡಿದ್ದವಳು ಇನ್ನೊಂದು ತುಂಡಿಗೆ ಬೇಡಿಕೆ ಸಲ್ಲಿಸಿದೆ. 'ಇದನ್ನು ಎಲ್ಲಿಂದ ತಂದಿರಿ' ಎಂದೂ ಪ್ರಶ್ನಿಸಿದೆ. ವಿಟ್ಲದಿಂದ ಸುಮಾರು 13 ಕಿಮೀ ದೂರದಲ್ಲಿರುವ ವೆಂಕಟರಮಣ ಶರ್ಮ ಎಂಬವರ ಹಲಸು ತೋಟದಲ್ಲಿ ತಯಾರಾದದ್ದು ಎಂಬ ಉತ್ತರ ಬಂತು.

ಸರಿ, ಪತಿ ಗೋವಿಂದಪ್ರಸಾದ್ ಜೊತೆಗೆ ಹಲಸು ತೋಟಕ್ಕೆ ಹೋಗಲು ನಿರ್ಧರಿಸಿ, ಬಂಟ್ವಾಳ ಸಮೀಪದ ಅಳಿಕೆ ಗ್ರಾಮದ ಮುಳಿಯದಲ್ಲಿರುವ ವೆಂಕಟರಮಣ ಶರ್ಮರು ಸಾವಯವ ಮಾದರಿಯಲ್ಲಿ ಹುಲುಸಾಗಿ ಬೆಳೆದ 'ಹಲಸು ವನ'ಕ್ಕೆ ಭೇಟಿ ನೀಡಿಯೇ ಬಿಟ್ಟೆವು.

ತಮ್ಮ ಪಾಲಿನ ಹತ್ತು ಎಕರೆ ಜಮೀನಿನಲ್ಲಿ ಸಾವಯವ ಮಾದರಿಯಲ್ಲೇ ಅಡಿಕೆ, ತೆಂಗು, ಬಾಳೆ, ಕಾಳುಮೆಣಸು ಮುಂತಾದ ಬೆಳೆಗಳನ್ನು ಬೆಳೆಯುವ ಶರ್ಮ ಅವರು ಸುಮಾರು ಎರಡೂವರೆ ಎಕರೆ ಜಾಗದಲ್ಲಿ ಸೀಸನ್ ಇಲ್ಲದೇ ಇರುವ ಕಾಲದಲ್ಲೂ ಸಿಗುವಂಥ ಹಲಸು ಬೆಳೆಸಿದ್ದಾರೆ. ಇವರ ತೋಟದಲ್ಲಿ ವಿವಿಧ ತಳಿಯ ಹಲಸು ಲಭ್ಯ. ಹಲಸು ತೋಟದ ನಿರ್ವಹಣೆಯಲ್ಲಿ ಬ್ಯುಸಿ ಆಗಿದ್ದ ಶರ್ಮರು ನಮ್ಮನ್ನು ನಗುಮೊಗದಿಂದಲೇ ಸ್ವಾಗತಿಸಿದರು. ತಿನ್ನಲು ರುಚಿರುಚಿಯಾದ ಹಲಸಿನ ಹಣ್ಣುಗಳ ಆತಿಥ್ಯವೂ ಆಯಿತು. ಸಮೃದ್ಧವಾಗಿ ಬೆಳೆದ ಹಲಸಿನ ಹಣ್ಣು ವೈವಿಧ್ಯಗಳ ಬೆಳೆಯನ್ನು ನೋಡುವುದು, ಇಲ್ಲಿ ತಯಾರಾಗುವ ಸ್ವಾದಿಷ್ಟಭರಿತ ಹಲ್ವ ಮಾಡುವ ವಿಧಾನವನ್ನು ತಿಳಿಯುವ ಉದ್ದೇಶವೂ ನಮ್ಮದಾಗಿತ್ತು.

'ನೋಡಿ, ಇದು ರುದ್ರಾಕ್ಷಿ ಹಲಸು. ಗಾತ್ರದಲ್ಲಿ ಹಣ್ಣುಗಳು ಸಣ್ಣವು, ಆಕಾರದಲ್ಲಿ ಗುಂಡಾಗಿದ್ದು ಹೆಚ್ಚುಕಡಿಮೆ ರುದ್ರಾಕ್ಷಿಯನ್ನೇ ಹೋಲುತ್ತವೆ. ಹಣ್ಣಿನ ತೊಳೆಗಳು ಸಾಧಾರಣ ಸೈಜಿನದು, ಆದರೆ ಅಧಿಕ ಸಂಖ್ಯೆಯಲ್ಲಿರುತ್ತವೆ. ರುಚಿಯಲ್ಲಿ ಅಂಥಾ ಹೇಳಿಕೊಳ್ಳುವ ಸಿಹಿ ಇಲ್ಲದಿದ್ದರೂ ಇಳುವರಿ ಮಾತ್ರ ಸಾಕಷ್ಟು ಕೊಡುತ್ತದೆ' ಶರ್ಮರು ವಿವರಿಸುತ್ತಿದ್ದರು. ನಾವು ಕೇಳುತ್ತಿದ್ದೆವು.

'ಇದು ಚಂದ್ರ ಹಲಸು. ಹಣ್ಣು ದೊಡ್ಡದೇ ಜೊತೆಗೆ ತೊಳೆಗಳು ಸಹ ದೊಡ್ಡದಿರುತ್ತವೆ. ಬಣ್ಣ ಥೇಟ್ ಹುಣ್ಣಿಮೆ ಚಂದಿರನಂತೆ ಕೇಸರಿ ಬಣ್ಣ, ಬಹಳ ರಸವತ್ತಾಗಿದ್ದು, ತಿನ್ನಲು ರುಚಿಯೋ ರುಚಿ. ಜೇನಿನ ಹನಿ ತೊಟ್ಟಿಕ್ಕಿದಂತೆ ತೊಳೆಗಳಿಂದ ರಸ ತೊಟ್ಟಿಕ್ಕುತ್ತದೆ. ಮಧುರಾತಿ ಮಧುರ ರುಚಿ ಕೊಡುವ ಚಂದ್ರ ಹಲಸಿನ ಘಮಲಿನಲ್ಲಿ ತೇಲಿ ಹೋದೆವು. ಹತ್ತಾರು ತೊಳೆಗಳನ್ನು ಮೆಲ್ಲದೆ ಮನಸ್ಸು ಕೇಳಲೇ ಇಲ್ಲ.

'ಇದು ಬಕ್ಕೆ ಹಲಸು. ಹಣ್ಣಿನ ತೊಳೆಗಳು ತುಸು ಗಟ್ಟಿ, ತಿನ್ನಲು ಸೂಕ್ತ. ಸಾಮಾನ್ಯವಾಗಿ ಎಲ್ಲರೂ ಬೆಳೆಯುತ್ತಾರೆ. ಅಧಿಕ ಇಳುವರಿ ಕೊಡುತ್ತದೆ. ಹೆಚ್ಚಿನ ಆರೈಕೆ ಬೇಕಾಗದು' ಎಂದರು.

'ಇದೋ, ಬಿಳುವ ಹಣ್ಣು. ತೊಳೆಗಳು ಬಹಳ ಮೃದು.